ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1574

ಉತ್ತರ ದಿನಾಂಕ : 20.03.2020

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಾರವಾರ ಜಿಲ್ಲೆಯಲ್ಲಿ ಪ್ರಾರಂಭದಿಂದ ಇದುವರೆವಿಗೂ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)</td><td>ಕಾರವಾರ ಜಿಲ್ಲೆ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ 243 ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ. ತಾಲ್ಲೂಕುವಾರು ವಿವರವನ್ನು ಈ ಕೆಳಗಿನಂತೆ ನೀಡಿದೆ.
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ನಿರ್ಮಾಣ ಮಾಡಿರುವ ಘಟಕಗಳು</th></tr>
<tr><td>1</td><td>ಅಂಕೋಲ</td><td>21</td></tr>
<tr><td>2</td><td>ಭಟ್ಕಳ</td><td>22</td></tr>
<tr><td>3</td><td>ಹಳಿಯಾಳ</td><td>92</td></tr>
<tr><td>4</td><td>ಹೊನ್ನಾವರ</td><td>4</td></tr>
<tr><td>5</td><td>ಕಾರವಾರ</td><td>16</td></tr>
<tr><td>6</td><td>ಕುಮಟಾ</td><td>28</td></tr>
<tr><td>7</td><td>ಮುಂಡಗೋಡು</td><td>23</td></tr>
<tr><td>8</td><td>ಸಿದ್ದಾಪುರ</td><td>6</td></tr>
<tr><td>9</td><td>ಸಿರ್ಸಿ</td><td>12</td></tr>
<tr><td>10</td><td>ಸೂಪ</td><td>12</td></tr>
<tr><td>11</td><td>ಯಲ್ಲಾಪುರ</td><td>7</td></tr>
<tr><td></td><td>ಒಟ್ಟು:</td><td>243</td></tr>
</table></td></tr>
<tr><td>ಆ.</td><td>ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣಕ್ಕೆ ಸರ್ಕಾರ ಇದುವರೆಗೂ ಮಾಡಿರುವ ಖರ್ಚು ಎಷ್ಟು; (ಮಾಹಿತಿ ನೀಡುವುದು)</td><td>ಸದರಿ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಾಣ ಮಾಡಲು ಇದುವರೆವಿಗೂ ಒಟ್ಟು ರೂ.174.67ಲಕ್ಷ ಅನುದಾನವನ್ನು ಖರ್ಚು ಮಾಡಲಾಗಿದೆ.</td></tr>
<tr><td>ಇ.</td><td>ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಿದಾಗ ಅವುಗಳ ಸರಿಯಾಗಿ ಕಾರ್ಯನಿರ್ವಹಿಸದೇ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಕಾರವಾರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಿರುವ ಘಟಕಗಳ ಪೈಕಿ, ವಿವಿಧ ಕಾರಣಗಳಿಂದ 70 ಘಟಕಗಳು ತಾತ್ಕಾಲಿಕವಾಗಿ ದುರಸ್ತಿಯಲ್ಲಿರುತ್ತವೆ. (ದಿನಾಂಕ:13.03.2020ರ ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರದ ಮಾಹಿತಿ ಪ್ರಕಾರ)
ಕಾರವಾರ ಜಿಲ್ಲೆ ವ್ಯಾಪ್ತಿಯಲ್ಲಿ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯ ಟೆಂಡರ್ ಮುಖೇನ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ, ಸಹಕಾರ ಸಂಘ/ಸಂಸ್ಥೆ ಮುಖೇನ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಇತರೆ ಅನುದಾನದಲ್ಲಿ ಅನುಷ್ಠಾನಗೊಳಿಸಿರುವ ಘಟಕಗಳ ಪೈಕಿ, ನಿರ್ವಹಣೆ ಅವಧಿ ಮುಗಿದಿರುವ/ನಿರ್ವಹಣೆ ಸಮಸ್ಯೆ ಇರುವ 77 ಘಟಕಗಳಿಗೆ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆದು, ಅನುಮೋದನೆಯಾದ ಗುತ್ತಿಗೆದಾರರಿಗೆ ಮುಂದಿನ 5 ವರ್ಷಗಳ ಅವಧಿಯವರೆಗೆ ನಿರ್ವಹಣೆಗಾಗಿ ಘಟಕಗಳನ್ನು ಹಸ್ತಾಂತರ ಮಾಡಲಾಗಿರುತ್ತದೆ.</td></tr>
</table>

<table>
<tr>
<td>ಈ.</td>
<td>ಶುದ್ಧ ಕುಡಿಯುವ ನೀರಿನ ಘಟಕಗಳನ್ನು ವ್ಯವಸ್ಥಿತವಾಗಿ ನಿರ್ವಹಿಸದಿರುವುದಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಂಡಿದೆ; (ವಿವರ ನೀಡುವುದು)</td>
<td>ನೀರು ಶುದ್ಧೀಕರಣ ಘಟಕಗಳ ಮೇಲುಸ್ತುವಾರಿ ನೋಡಿಕೊಳ್ಳಲು ವಿಫಲರಾದ ಏಜೆನ್ಸಿಗಳ ಮೇಲೆ ತೆಗೆದುಕೊಂಡ ಕ್ರಮ ಈ ಕೆಳಕಂಡಂತಿವೆ:
<table>
<tr><th>ಕ್ರ ಸಂ.</th><th>ಜಿಲ್ಲೆ</th><th>ಸಂಸ್ಥೆ</th><th>ತಡೆಹಿಡಿಯಲ್ಪಾದ / ಮುಟ್ಟುಗೋಲು ಹಾಕಿಕೊಂಡಿರುವ ಮೊತ್ತ. (ರೂ.ಲಕ್ಷಗಳಲ್ಲಿ)</th></tr>
<tr><td>01</td><td>ಧಾರವಾಡ</td><td>Membrane filters</td><td>08.25</td></tr>
<tr><td>02</td><td>ಮೈಸೂರು</td><td>Fontus Water Pvt Ltd</td><td>24.39</td></tr>
<tr><td>03</td><td>ಬೆಳಗಾವಿ</td><td>Membrane filters</td><td>34.00</td></tr>
</table>
ಕೆ.ಆರ್.ಐ.ಡಿ.ಎಲ್.ಸಂಸ್ಥೆಗೆ ನೀಡಿದ ವಾರ್ಷಿಕ ನಿರ್ವಹಣೆ ಗುತ್ತಿಗೆಯನ್ನು ದಿನಾಂಕ:31.08.2019ರಿಂದ ನಿಲ್ಲಿಸಲಾಗಿದ್ದು, ಸದರಿ ಘಟಕಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳು ಹಸ್ತಾಂತರ ಮಾಡಿಕೊಂಡು, ಮುಂದಿನ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಅನುಮೋದನೆಯಾದ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು ಘಟಕಗಳನ್ನು ಹಸ್ತಾಂತರ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td>
</tr>
<tr>
<td>ಉ.</td>
<td>ಶುದ್ಧ ನೀರಿನ ಘಟಕಗಳು ಸ್ಥಾಪನೆಯಾದ ದಿನದಿಂದ ಇದುವರೆಗೂ ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯಾದ್ಯಂತ ಈ ರೀತಿ ಕಾರ್ಯಾರಂಭ ಮಾಡದಿರುವ ಘಟಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಿರುವ 17154 ನೀರು ಶುದ್ಧೀಕರಣ ಘಟಕಗಳ ಪೈಕಿ 12642 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 4512 ನೀರು ಶುದ್ಧೀಕರಣ ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಿದೆ. (ದಿನಾಂಕ:13.03.2020ರ ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರದ ಮಾಹಿತಿ ಪ್ರಕಾರ)</td>
</tr>
</table>

ಸಂ.ಗ್ರಾಕುನೀ&ನೈಇ/122/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ-1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1394 (1574)ರ ಲಗತ್ತು

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಿರುವ ನೀರು ಶುದ್ಧೀಕರಣ ಘಟಕಗಳ ವಸ್ತು-ಸ್ಥಿತಿ ವಿವರ:

ಕ್ರ.ಸಂ.	ಜಿಲ್ಲೆ	ಅನುಷ್ಠಾನಗೊಳಿಸಿರುವ ಘಟಕಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ	ತಾತ್ಕಾಲಿಕವಾಗಿ ಕಾರ್ಯನಿರ್ವಹಿಸದೇ ಇರುವ ಘಟಕಗಳ ಸಂಖ್ಯೆ
1	ಬಾಗಲಕೋಟೆ	810	568	242
2	ಬಳ್ಳಾರಿ	774	562	212
3	ಬೆಳಗಾಂ	1285	1010	275
4	ಬೆಂಗಳೂರು(ನ)	292	220	72
5	ಬೆಂಗಳೂರು (ಗ್ರಾ)	606	579	27
6	ಬೀದರ್	381	165	216
7	ಚಾಮರಾಜನಗರ	204	110	94
8	ಚಿಕ್ಕಬಳ್ಳಾಪುರ	576	543	33
9	ಚಿಕ್ಕಮಗಳೂರು	215	162	53
10	ಚಿತ್ರದುರ್ಗ	1040	797	243
11	ದಕ್ಷಿಣಕನ್ನಡ	149	69	80
12	ದಾವಣಗೆರೆ	771	697	74
13	ಧಾರವಾಡ	453	267	186
14	ಗದಗ	487	340	147
15	ಹಾಸನ	417	313	104
16	ಹಾವೇರಿ	772	583	189
17	ಕಲಬುರಗಿ	445	154	291
18	ಕೊಡಗು	36	21	15
19	ಕೋಲಾರ	1090	920	170
20	ಕೊಪ್ಪಳ	612	349	263
21	ಮಂಡ್ಯ	751	486	265
22	ಮೈಸೂರು	625	359	266
23	ರಾಯಚೂರು	582	411	171
24	ರಾಮನಗರ	532	445	87
25	ಶಿವಮೊಗ್ಗ	321	205	116
26	ತುಮಕೂರು	1432	1144	288
27	ಉಡುಪಿ	59	53	6
28	ಉತ್ತರ ಕನ್ನಡ	243	173	70
29	ವಿಜಯಪುರ	853	741	112
30	ಯಾದಗಿರಿ	341	196	145
ಒಟ್ಟು :		**17154**	**12642**	**4512**

ಟಿಪ್ಪಣಿ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರದ ದಿನಾಂಕ:13.03.2020ರ ದಾಖಲಾತಿ ಪ್ರಕಾರ